



ಹರಿಯತೊಡಗಿದವು. ಅಮ್ಮನಿಗೂ ಹೇಳ ತೀರದ ವಿಸ್ಮಯ. ವಿನ್ಯಾಸಗಳು ಚೆನ್ನಾಗಿ ಮೂಡಿಬಂದವು. ಅಲ್ಲಿಂದ ಕುಸುಮ ಅವರ ರಂಗೋಲಿ ಚಿತ್ತಾರ ಕಲೆ ಅವ್ಯಾಹತವಾಗಿ ಮುಂದುವರಿಯಿತು.

'ಪುಸ್ತಕದಲ್ಲಿ ಬರೆದಿಟ್ಟುಕೋ, ಇಲ್ಲವಾದರೆ ಕಾಲಕ್ರಮದಲ್ಲಿ ಮರೆತು ಹೋಗಬಹುದು' ತಾಯಿ ಮಗಳನ್ನು ಹುರಿದುಂಬಿಸಿದರು. ಒಂದು ವರ್ಷದೊಳಗೆ ಸುಮಾರು 450 ವಿನ್ಯಾಸಗಳು ರೂಪುಗೊಂಡವು.

'ಒಮ್ಮೆ ಮನೆಗೆ ಬಂದ ನನ್ನ ಚಿಕ್ಕಮ್ಮ ಪರಿಮಳಾ, ರಂಗೋಲಿಯ ಕಲ್ಪನೆಗಳನ್ನು ನೋಡಿ ಸಂತೋಷಗೊಂಡು, 'ಈ ರಂಗೋಲಿ ಚಿತ್ತಾರಗಳು ಕೇವಲ ದೇವರ ಮನೆಗೆ ಸೀಮಿತವಾಗಬೇಕಾಗಿಲ್ಲ. ಡ್ರಾಯಿಂಗ್ ಹಾಳೆಗಳ ಮೇಲೆ, ಜ್ಯುವೆಲ್ಲರಿ, ಸ್ಯಾರಿ ಡಿಸೈನ್ಸ್, ಮೆಹೆಂದಿ, ಕುಂದನ್ ಆರ್ಟ್ಸ್, ಟೆಂಪಲ್ ಆರ್ಟ್ಸ್, ಲೆಹಂಗಾ, ಸಿರಾಮಿಕ್ ಆರ್ಟ್ಸ್, ಗ್ಲಾಸ್ ಪೇಂಟಿಂಗ್, ಮದುವೆ ಮನೆಯಲ್ಲಿ ಬಳಸುವ ಕುಶಲ ಕಲೆಯ ವಿವಿಧ ವಸ್ತುಗಳು ಮುಂತಾದ ಹತ್ತು ಹಲವು ಕಲಾ ಪ್ರಕಾರಗಳಲ್ಲಿ ರಂಗೋಲಿಯ ನಕ್ಷೆಗಳನ್ನು ಬಳಸಬಹುದು ಎಂದು ಸಲಹೆ ನೀಡಿದರು. ಅವರ ಸಲಹೆಯ ಮೇರೆಗೆ, ರಂಗೋಲೆಯ ವಿನ್ಯಾಸಗಳನ್ನು ಹೇಗೆ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ವಿವರಿಸುವ ಸಲುವಾಗಿ ಮಾದರಿಗಳನ್ನು ನಿರ್ಮಿಸಿಕೊಂಡೆ. ನಮ್ಮ ನಾಡಿನ ಸುಪ್ರಸಿದ್ಧ ಚಿತ್ರಕಲಾವಿದರಾದ ರಾಧಾಕೃಷ್ಣಶಾಸ್ತ್ರಿಗಳು ವಿನ್ಯಾಸಗಳನ್ನೂ ಮಾಡೆಲ್‌ಗಳನ್ನೂ ಪರಿಶೀಲಿಸಿ, ಉಪಯುಕ್ತ ಸಲಹೆಗಳನ್ನು ನೀಡಿದರು. ಅಲ್ಲಿಂದ ಕಲೆಯಲ್ಲಿ ಹಿಡಿತ ಸಾಧಿಸಿಕೊಂಡೆ' ಎನ್ನುತ್ತಾರೆ ಕುಸುಮ.

'ರಂಗೋಲಿ ಕಲೆಯಲ್ಲಿ ಅಕ್ಷರಮಾಲೆಯನ್ನೂ ಅಂಕಗಳನ್ನೂ ಹೆಣೆಯಬಾರದೇಕೆ? ಮಕ್ಕಳಿಗೆ ಆಟದ ಜೊತೆಗೆ ಕಲಿಕೆಯೂ ಯಾಕಾಗಬಾರದು? ಎನಿಸಿತು. ಶಿಕ್ಷಣ ತಜ್ಞರೊಂದಿಗೆ ಈ ವಿಷಯ ಕುರಿತು ಸಮಾಲೋಚನೆ ನಡೆಸಿದಾಗ ಅವರು ತೋರಿದ ಆಸಕ್ತಿಯಿಂದಾಗಿ ನನ್ನ ಉತ್ಸಾಹ ಇಮ್ಮಡಿಯಾಯಿತು. ತುಲಸಿ ರಂಗೋಲಿ, ಹಾಗೂ ರಂಗೋಲಿಯಲ್ಲಿ ಅಕ್ಷರಮಾಲೆ ಮತ್ತು ಅಂಕಗಳು ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಬೇಕೆಂಬ ಆಸೆ ಅಂಕುರಿಸಿತು. ಪ್ರಿಸಮ್ ಬುಕ್ ಹೌಸ್‌ನ ಪ್ರಾಣೇಶ್ ಸಿರಿವರ ಅವರು ಪುಸ್ತಕ ಪ್ರಕಟಿಸಿ ಪ್ರೋತ್ಸಾಹಿಸಿದರು' ಎನ್ನುತ್ತಾರೆ ಈ ಕಲಾವಿದೆ.

## ವಿಭಿನ್ನ ಅಭಿರುಚಿ

ಚಿಕ್ಕಂದಿನಿಂದಲೂ ಕುಸುಮ ಅವರಿಗೆ ಸಂಗೀತ, ಭರತನಾಟ್ಯ, ಆಂಗ್ಲ ಸಾಹಿತ್ಯ, ವನ್ಯಮೃಗಗಳ ಬದುಕು ಬಾಳು ಇವುಗಳಲ್ಲಿ ಆಸಕ್ತಿ, ಅಭಿರುಚಿ. ಕೆಲಕಾಲ ಫ್ರೀಲಾನ್ಸ್ ಜರ್ನಲಿಸ್ಟಾಗಿ ಕೆಲಸ ಮಾಡಿದ್ದಾರೆ. ವನ್ಯಮೃಗಗಳ ವಿಷಯ ಕುರಿತು ಇವರು ಬರೆದ ಹತ್ತು ಹಲವು ಲೇಖನಗಳು ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗುರು ಕೇಶವಮೂರ್ತಿ ಅವರ ಬಳಿ ಭರತನಾಟ್ಯವನ್ನು ಅಭ್ಯಾಸ ಮಾಡಿದ್ದಲ್ಲದೆ ನಾಲ್ಕಾರು ನೃತ್ಯರೂಪಕಗಳಲ್ಲಿ ಭಾಗವಹಿಸಿದ್ದಾರೆ. ವಿದ್ವಾನ್ ವೀಣಾ ವೆಂಕಟಸುಬ್ಬರಾವ್, ವಿದುಷಿ ಸುಧಾ ವಾದಿರಾಜ್ ಹಾಗೂ ವಿಖ್ಯಾತ ವೈಣಿಕ ಡಾ.ದೊರೆಸ್ವಾಮಿ ಅಯ್ಯಂಗಾರ್ ಬಳಿ ವೀಣೆ ಕಲಿತಿದ್ದಾರೆ. ಸುಮಾರು 20 ವರ್ಷಗಳ ಕಾಲ ಮಕ್ಕಳಿಗೆ ವೀಣಾ ವಾದನ ಹೇಳಿಕೊಟ್ಟಿದ್ದಾರೆ.

ಆಸಕ್ತಿ, ಅಭಿರುಚಿ ಇದ್ದರೆ ಕಲೆ ಬೇಗನೆ ಒಲಿಯುತ್ತದೆ. ಒಲಿದ ಕಲೆ ನೂರಾರು ಆಸಕ್ತರಿಗೆ ಹೇಳಿಕೊಟ್ಟರೆ ಮನಸ್ಸಿಗೂ ತೃಪ್ತಿ, ಸಮಾಜವೂ ಸುಸಂಸ್ಕೃತವಾಗುತ್ತದೆ. ■

